**ದಿನಾಂಕಃ 24.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ಮುನಿಗಂಗಮ್ಮರವರು ಖರೀದಿ ಮಾಡಿರುವ ಕ್ರಯಪತ್ರವನ್ನು ನಿಪಿ-4 ಎಂದು ಹಾಜರುಪಡಿಸಿದ್ದು, ಅದರಲ್ಲಿರುವ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 25 ಗಜ, ಉತ್ತರ ದಕ್ಷಿಣ 26 ಗಜ ಇರುತ್ತದೆ. ಸದರಿ ಪ್ರಮಾಣ ಪತ್ರವನ್ನು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಹಾಜರುಪಡಿಸಿರುತ್ತೇನೆ. ನಿಪಿ-4 ಕ್ರಯಪತ್ರದಲ್ಲಿರುವ ಚೆಕ್ಕುಬಂಧಿ ಪೂರ್ವಕ್ಕೆ ಕಾರ್ನಾಳದ ಮುನಿಶ್ಯಾಮಪ್ಪ ಮತ್ತು ಸೋಮಣ್ಣ, ಪಶ್ಚಿಮಕ್ಕೆ ಚಿಕ್ಕಪ್ಪಣ್ಣನವರ ಹಿತ್ತಲು, ಉತ್ತರಕ್ಕೆ ಕಾರ್ನಾಳ ತಮ್ಮಣ್ಣ ಮತ್ತು ಸರ್ಕಾರಿ ರಸ್ತೆ, ದಕ್ಷಿಣಕ್ಕೆ ದಾಸಿಗನ ಮಗ ಮುನಿಗ ಹಾಗೂ ಮೇಲೂರವರ ಹಿತ್ತಲು. ನಿಪಿ-4 ರಲ್ಲಿ ಪೂರ್ವಕ್ಕೆ ಸೋಮಣ್ಣ ಎಂದು ಇರುವುದಿಲ್ಲ ಎಂದರೆ ಸರಿಯಲ್ಲ. ಕಾರ್ನಾಳದ ಮುನಿಶ್ಯಾಮಪ್ಪ ಪ್ರತಿವಾದಿಯ ತಂದೆ. ಉತ್ತರಕ್ಕೆ ಇರುವ ಕಾರ್ನಾಳದ ತಮ್ಮಣ್ಣ ಪ್ರತಿವಾದಿಯ ಅಜ್ಜ. ನಿಪಿ-4 ರ ಪ್ರಕಾರ ಉತ್ತರಕ್ಕೆ ಹಾಗೂ ಪೂರ್ವಕ್ಕೆ ಪ್ರತಿವಾದಿಯರ ಸ್ವತ್ತು ಇರುತ್ತದೆ ಎಂದರೆ ಸರಿ. ದಾವಾಸ್ವತ್ತಿನ ಪೂರ್ವಕ್ಕೆ ಮತ್ತು ಉತ್ತರಕ್ಕೆ ಪ್ರತಿವಾದಿಯವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ನಿಪಿ-4 ರಲ್ಲಿರುವ ಸ್ವತ್ತನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡಿರುವುದಿಲ್ಲ.

ನಿಪಿ-4 ನ್ನು ಹೊರತುಪಡಿಸಿ ದಾವಾಸ್ವತ್ತಿನ ವಿಸ್ತೀರ್ಣವನ್ನು ತೋರಿಸಲು ಬೇರೆ ಯಾವುದೇ ದಾಖಲೆಗಳನ್ನು ಕೊಟ್ಟಿರುವುದಿಲ್ಲ. ನಿಪಿ-8 ಕ್ಕೆ ಸಂಬಂಧಿಸಿದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹೇಳಿರುವಂತಹ ದಾವಾಸ್ವತ್ತು ವಾದಿಗಳಿಗೆ ಸೇರಿದ್ದು, ಸದರಿ ಸ್ವತ್ತು ನನಗೆ ಅಥವಾ ನನ್ನ ತಂದೆ ಅಥವಾ ಅಣ್ಣನಿಗೆ ಸೇರಿದ ಸ್ವತ್ತಾಗಿರುವುದಿಲ್ಲ. ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿಗೆ ಅರ್ಜಿಯನ್ನು ನಾನು ನೀಡಿರುವುದಿಲ್ಲ 1 ನೇ ವಾದಿಯವರು ನೀಡಿರುತ್ತಾರೆ. 1 ನೇ ವಾದಿಯವರು ಅರ್ಜಿಯನ್ನು ನೀಡಿದ ದಿನಾಂಕ ನೆನಪಿರುವುದಿಲ್ಲ. ಅರ್ಜಿಯ ಆಧಾರದ ಮೇಲೆ ಪಟ್ಟಣ ಪಂಚಾಯಿತಿಯ ಅಧಿಕಾರಿಗಳು ಯಾವ ದಿನಾಂಕದಂದು ತಾಲ್ಲೂಕು ಪಂಚಾಯಿತಿಯವರಿಗೆ ಅರ್ಜಿಯನ್ನು ಕಳುಹಿಸಿರುತ್ತಾರೆ ಎಂದರೆ ನಿನಪಿಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಸರ್ವೇಯರ್ ರವರು ನಿಪಿ-9 ನ್ನು ತಯಾರು ಮಾಡುವ ಮುನ್ನ ನೋಟೀಸ್ ನೀಡಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ-9 ರಲ್ಲಿ ಯಾರ ಸಹಿ ಇರುತ್ತದೆ ಎಂದರೆ ಸಾಕ್ಷಿಯು ಸಹಿ ಇರುವುದಿಲ್ಲ ಚೆಕ್ಕುಬಂಧಿ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ಕಾಲಕ್ಕೆ 1 ನೇ ವಾದಿಯು ಇದ್ದು ಅದರ ವಿಚಾರ ಅವರಿಗೆ ಮಾತ್ರ ಗೊತ್ತಿರುತ್ತದೆ ನನಗೆ ಸದರಿ ವಿಚಾರದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ವಾದಿಗಳು ತೋರಿಸಿದಂತೆ ಸರ್ವೇಯನ್ನು ಮಾಡಿ ನಿಪಿ-9 ನ್ನು ನೀಡಿರುತ್ತಾರೆ ಎಂದರೆ ಸರಿ. ನಿಪಿ-9 ರ ನಕ್ಷೆಯಲ್ಲಿ ಪೂರ್ವ ಪಶ್ಚಿಮಕ್ಕೆ ಹಾಗೂ ಉತ್ತರ ದಕ್ಷಿಣಕ್ಕೆ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ಗೊತ್ತಿರುತ್ತದೆ. ವಿಸ್ತೀರ್ಣ ಪೂರ್ವ ಪಶ್ಚಿಮ 25 ಗಜ, ಉತ್ತರ ದಕ್ಷಿಣ 26 ಗಜ ಇರುತ್ತದೆ.

ಸಾಕ್ಷಿಗೆ ನಿಪಿ-9 ನ್ನು ತೋರಿಸಲಾಗಿ ಅದರಲ್ಲಿರುವ ವಿಸ್ತೀರ್ಣ ಸರಿಯಾಗಿ ನಮೂದಾಗಿದೆಯೋ ಇಲ್ಲವೋ ಎಂದರೆ ಸಾಕ್ಷಿಯು ಸದರಿ ದಾಖಲೆಯಲ್ಲಿ ಮೀಟರ್ ನಲ್ಲಿ ಬರೆಯಲಾಗಿರುತ್ತದೆ, ನನಗೆ ಗಜದಲ್ಲಿ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ಮಾಡಿಸುವಾಗ ಸರ್ವೇಯರ್ ರವರು ನಮಗೆ ಗಜದಲ್ಲಿ ಅಳತೆಯನ್ನು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-9 ರಲ್ಲಿ ದಕ್ಷಿಣಕ್ಕೆ ಆನಂದ್‌ರವರ ಸ್ವತ್ತು ಎಂದು ಬರೆದಿರುತ್ತದೆ ಹಾಗೂ ವಾದ ಪತ್ರದಲ್ಲಿ ದಕ್ಷಿಣಕ್ಕೆ ಮುನಿಗ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಆನಂದ್‌ರವರು ಮುನಿಗರವರ ಮೊಮ್ಮಗ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ನಾನು ವಾದಪತ್ರವನ್ನು ಸಲ್ಲಿಸುವ ಸಮಯಕ್ಕೆ ದಕ್ಷಿಣಕ್ಕೆ ಆನಂದ್‌ರವರು ಸ್ವಾಧೀನದಲ್ಲಿದ್ದರು. ಸದರಿ ವಿಚಾರವನ್ನು ವಾದಪತ್ರವನ್ನು ಸಲ್ಲಿಸುವ ಸಮಯದಲ್ಲಿ ನಾನು ಹೇಳಿರುವುದಿಲ್ಲ ಎಂದರೆ ಸರಿ. ವಾದಪತ್ರದಲ್ಲಿ ಉತ್ತರಕ್ಕೆ ಕಾರ್ನಾಳದ ತಮ್ಮಣ್ಣರವರ ಸ್ವತ್ತು ಎಂದು ನಮೂದು ಇದ್ದು, ನಿಪಿ-9 ರ ಚೆಕ್ಕುಬಂಧಿಯಲ್ಲಿ ಉತ್ತರಕ್ಕೆ ಏನು ನಮೂದು ಇರುತ್ತದೆ ಎಂದು ನಿಪಿ-9 ನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ಉತ್ತರಕ್ಕೆ ಸರ್ಕಾರಿ ಜಾಗ ಇರುತ್ತದೆ ಎಂದು ಹಾಗೂ ತಮ್ಮಣ್ಣರವರ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-9 ರಲ್ಲಿ ಉತ್ತರಕ್ಕೆ ಸರ್ಕಾರಿ ಸ್ವತ್ತು ಎಂದು ತೋರಿಸಿರುವುದಿಲ್ಲ ಹಾಗೂ ಪ್ರತಿವಾಗಳಿಗೆ ಸರ್ವೇಯ ನೋಟೀಸ್‌ನ್ನು ನೀಡದೇ ಹಾಗೂ ಅವರ ಸ್ವತ್ತನ್ನು ಸಹ ತೋರಿಸದೇ ವಾದಿಗಳು ಸರ್ವೇಯನ್ನು ಮಾಡಿಸಿ ನಿಪಿ-9 ನ್ನು ತಯಾರಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**<u>ಮುಂದುವರೆದ ಪಾಟೀ ಸವಾಲುಃ</u> ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೊಡ್ಡಬಳ್ಳಾಪುರ.**